**ಪ್ರಧಾನ ದಿವಾಣಿ ನ್ಯಾಯಾಧೀಶರು ಹಾಗೂ ಪ್ರ. ದ. ನ್ಯಾ. ದಂಡಾಧಿಕಾರಿಗಳ ನ್ಯಾಯಾಲಯ, ಗೋಕಾಕ**

**ಸಿ.ಸಿ. ನಂ.1937/2023**

**ಪಿರ್ಯಾದುದಾರರುಃ** ಗೋಕಾಕ ಟೆಕ್ಸಟೈಲ್ಸ ಲಿ.,
ಪ್ರತಿನಿಧಿಸುವವರುಃ ರಮೇಶ ಆರ್ ಪಾಟೀಲ

**- ವಿರುದ್ಧ -**

**ಆರೋಪಿಃ** ಯಲ್ಲಪ್ಪ ಲಕ್ಕಪ್ಪ ಪೂಜೇರಿ,
ವಾಸಃ ಕ್ವಾರ್ಟರ್ಸ ನಂ.17/9 ಗೋಕಾಕ ಪಾಲ್ಸ,
ತಾಃ ಗೋಕಾಕ, ಜಿ.ಬೆಳಗಾವಿ.

**ಆಪಾದನೆ**

**ಶ್ರೀ ರಾಜೀವ ಗೋಳಸಾರ, ಬಿ.ಎ., ಎಲ್.ಎಲ್.ಎಂ., ಪ್ರಧಾನ ದಿವಾಣಿ ನ್ಯಾಯಾಧೀಶರು ಹಾಗೂ ಪ್ರ.ದ.ನ್ಯಾ. ದಂಡಾಧಿಕಾರಿ, ಗೋಕಾಕ,** ಆದ ನಾನು, ಆರೋಪಿಯಾದ ನಿಮ್ಮ ಮೇಲೆ ಈ ಕೆಳಕಂಡಂತೆ ಆಪಾದನೆ ಮಾಡುತ್ತಿದ್ದೇನೆಃ

ಪಿರ್ಯಾದಿದಾರರ ಕಂಪನಿಯು ಅಧಿನಿಯಮದ ಕೆಳಗಡೆ ನೊಂದಣಿಯಾಗಿದ್ದು, ಹೀಗಿರುವಾಗ ಆರೋಪಿಯಾದ ನೀವು ಗೋಕಾಕ ಟೆಕ್ಸಟೈಲ್ಸ್ ನಲ್ಲಿ ನೇಮಕಾತಿಯಾಗಿರುವುದರಿಂದ ಪಿರ್ಯಾದುದಾರರ ಟೆಕ್ಸಟೈಲ್ಸ್ ಕಂಪನಿಯಲ್ಲಿ ದಿನಾಂಕ 05-06-1999 ರಂದು ಕೆಲಸ ನಿರ್ವಹಿಸುತ್ತಿರುವುದರಿಂದ ಕಂಪನಿಯು ಆರೋಪಿಯಾದ ನಿಮಗೆ ವಸತಿ ಗೃಹ ನಂ.17/9 ಗೋಕಾಕ ಫಾಲ್ಸ (17/9 ಫಾರಂ .3 ಟಿ ಎಂ ಸಿ ಕೊಣ್ಣೂರು) ನಿವೇಶನವನ್ನು ಉಪಯೋಗಿಸಿಕೊಳ್ಳಲು ಅನುಮತಿ ನೀಡಿದ್ದು, ನಂತರ ಆರೋಪಿಯಾದ ನೀವು ಸದರಿ ವಸತಿ ಗೃಹದಲ್ಲಿ ವಾಸವಾಗಿರುತ್ತೀರಿ,

ಮುಂದುವರೆದು ಆರೋಪಿಯಾದ ನೀವು ದಿನಾಂಕ 24-03-2014 ರಂದು ಕೆಲಸಕ್ಕೆ ರಾಜಿನಾಮೆಕೊಟ್ಟಿರುವುದರಿಂದ ಪಿರ್ಯಾದುದಾರರ ಕಂಪನಿಯ ನಿಯಮದಂತೆ ಕಂಪನಿಯ ವಸತಿಗೃಹ ನಂ.17/9 ಗೋಕಾಕ ಫಾಲ್ಸ (17/9 ಫಾರಂ .3 ಟಿ ಎಂ ಸಿ ಕೊಣ್ಣೂರು) ನಿವೇಶನದಲ್ಲಿ ವಾಸಮಾಡುವಂತಿಲ್ಲ. ಹೀಗಾಗಿ ಪಿರ್ಯಾದುದಾರರ ಪರ ವಕೀಲರು ದಿನಾಂಕ 17-10-2015 ರಂದು ನೋಟಿಸನ್ನು ನೀಡಿದ್ದರೂ ಸಹ ಸದರಿ ವಸತಿಗೃಹದಲ್ಲಿ ಆರೋಪಿಯಾದ ನೀವು ವಾಸವಾಗಿದ್ದು, ಆ ಮೂಲಕ ಕಂಪನಿ ಕಾಯಿದೆಯ ಕಲಂ 452(2)ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಎಸಗಿರುತ್ತೀರಿ ಎಂದು ಆಪಾದಿಸಲಾಗಿರುತ್ತದೆ.

**<u>ಆರೋಪಿಯ ಹೇಳಿಕೆ</u>**

ಪ್ರಶ್ನೆ ನಂ.1. ಈಗ ಓದಿ ಹೇಳಿದ ಆಪಾದನೆಯನ್ನು ಕೇಳಿಸಿಕೊಂಡಿರಾ ? ತಿಳಿಯಿತೇ ?

ಉತ್ತರಃ

ಪ್ರಶ್ನೆ ನಂ.2. ಸದರಿ ಆಪಾದನೆಯನ್ನು ಒಪ್ಪಿಕೊಳ್ಳುವಿರಾ ? ಅಥವಾ ವಿಚಾರಣೆಯಾಗಬೇಕಾ ?

ಉತ್ತರಃ

ಮೇಲಿನ ಆಪಾದನೆಯನ್ನು ಆರೋಪಿಗೆ ಕನ್ನಡ ಭಾಷೆಯಲ್ಲಿ ಓದಿ ಹೇಳಿ, ಆರೋಪಿಯು ಕೊಟ್ಟ ಉತ್ತರವು ಸಂಪೂರ್ಣ ಹಾಗೂ ಸರಿಯಾದ ಮಾಹಿತಿಯನ್ನೊಳಗೊಂಡಿದೆ ಎಂದು ಈ ದಿನ ಅಂದರೆ ದಿನಾಂಕ **02-05-2024** ರಂದು ತೆರೆದ ನ್ಯಾಯಾಲಯದಲ್ಲಿ ದೃಢೀಕರಿಸುತ್ತೇನೆ.

**(ರಾಜೀವ ಗೋಳಸಾರ)**
**ಪ್ರಧಾನ ಪ್ರ.ದ.ನ್ಯಾ. ದಂ, ಗೋಕಾಕ.**